ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಗುರುನಾಥ್:- ಮಾನ್ಯ ಅಧ್ಯಕ್ಷರೆ, ಕಟ್ಟಡ ರೆಡಿ ಇದೆ, ಆದರೆ ಪೀಠೋಪಕರಣಗಳು ಮತ್ತು ಸಿಬ್ಬಂದಿಗಳು ಇರುವುದಿಲ್ಲ.

ಅಧ್ಯಕ್ಷರು:- ಇವರು ಮೊದಲೇ ಹೋಗಿ, ವಹಿವಾಟುಗಳನ್ನು ಕುದುರಿಸಿಕೊಂಡು ಬಂದು ನಂತರ ಪ್ರಶ್ನೆಯನ್ನು ಹಾಕಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿದ್ದಂತಹ ಐ.ಟಿ.ಐ. ಶಾಲೆಯಲ್ಲಿ ಸಂದರ್ಶನ ನಡೆಯುವಂತಹ ಸಂದರ್ಭದಲ್ಲಿ ಸಂದರ್ಶನ ಕಮಿಟಿಯಲ್ಲಿ ನಾನೂ ಸಹ ಸದಸ್ಯನಾಗಿದ್ದೆ. ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನಿರಾಶರಾಗಿ ಹೋಗಿದ್ದಾರೆ. ಆದಕಾರಣ ಧಾರವಾಡದಲ್ಲಿ ಐ.ಟಿ.ಐ. ಯನ್ನು ಸ್ಥಾಪಿಸುವುದು ಅತ್ಯಂತ ಅವಶ್ಯಕತೆ ಇದೆ. ಆದ್ದರಿಂದ ಈ ಕೈಗಾರಿಕಾ ತರಬೇತಿ ಕೇಂದ್ರವನ್ನು ಧಾರವಾಡದಲ್ಲಿ ಸ್ಥಾಪಿಸಲು ಮಾನ್ಯ ಮಂತ್ರಿಗಳು ಆದಷ್ಟು ಶೀಘ್ರವಾಗಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಗುರುನಾಥ್:- ಇದನ್ನು ಪರಿಶೀಲನೆ ಮಾಡುತ್ತೇನೆ.

ವಿಷಯ: ಸಕಲೇಶಪುರ-ಆಲೂರು ತಾಲ್ಲೂಕಿನಲ್ಲಿ ಕೊಳವೆ ಬಾವಿಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 128(548)

ಶ್ರೀ ಬಿ.ಬಿ.ಶಿವಪ್ಪ (ಸಕಲೇಶಪುರ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

1) ಸಕಲೇಶಪುರ-ಆಲೂರು ತಾಲ್ಲೂಕಿನಲ್ಲಿ ಕಳೆದ 9 ತಿಂಗಳಿಂದ ಕೊರೆಸಿರುವ ಕೊಳವೆ ಬಾವಿಗಳೆಷ್ಟು?

2) ಇವುಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯಾಧಿಕಾರಿ ಕೊರೆದಿರುವ ಕೊಳವೆ ಬಾವಿಗಳೆಷ್ಟು?

3) ಈ ಕೊಳವೆ ಬಾವಿಗಳನ್ನು ಕೊರೆಯಲು ನೀಡಿರುವ ಗುತ್ತಿಗೆದಾರರು ಹಾಗೂ ಅವರಿಗೆ ಇದುವರೆಗೂ ಪಾವತಿಯಾದ ಹಣವೆಷ್ಟು?

4) ಈ ಕೊಳವೆ ಬಾವಿಗಳನ್ನು ಗುತ್ತಿಗೆದಾರರಿಂದ ಕೊರೆಯಿಸಲಾಗಿದೆಯೇ? ಹಾಗಿದ್ದಲ್ಲಿ ಇದಕ್ಕೆ ಸರ್ಕಾರದ ಅನುಮತಿ ನೀಡಿದೆಯೇ?

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1) ಕಳೆದ 9 ತಿಂಗಳಿಂದ ಕೊರೆಸಿರುವ ಕೊಳವೆ ಬಾವಿಗಳ ಸಂಖ್ಯೆ: 52

ಸಕಲೇಶಪುರ ತಾಲ್ಲೂಕು	: 18
ಆಲೂರು ತಾಲ್ಲೂಕು	: 34
ಒಟ್ಟು	: 52

2) ಜಿಲ್ಲಾಧಿಕಾರಿಗಳಿಂದ ಕೊರೆಯಿಸಿದ ಕೊಳವೆ ಬಾವಿಗಳ ಸಂಖ್ಯೆ: ಇಲ್ಲ
ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ

ಕೊರೆಯಿಸಿದ ಕೊಳವೆ ಬಾವಿಗಳ ಸಂಖ್ಯೆ 52

3) ಎಲ್ಲಾ 52 ಕೊಳವೆ ಬಾವಿಗಳನ್ನು ಸಾರ್ವಜನಿಕ ಆರೋಗ್ಯ ತಾಂತ್ರಿಕ ಇಲಾಖೆಯಿಂದ ಕೊರೆಯಿಸಲಾಗಿದೆ.

4) ಉದ್ಭವಿಸುವುದಿಲ್ಲ.

ಶ್ರೀ ಬಿ.ಬಿ. ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ಅವರ ಉತ್ತರದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಕೊಳವೆ ಬಾವಿ ತೆಗೆಸುವ ವಿಚಾರದಲ್ಲಿ ನಾನು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಕೆಲವು ಏರಿಯಾಗಳಲ್ಲಿ ತಹಸೀಲ್ದಾರ್‌ರವರ ಮುಖಾಂತರ ಜಿಲ್ಲಾಧಿಕಾರಿಗಳು ಕೊಳವೆ ಬಾವಿಗಳನ್ನು ಕೊರೆಸುತ್ತಿರುವ ವಿಚಾರ ಮಾನ್ಯ ಮಂತ್ರಿಗಳ ಗಮನಕ್ಕೆ ಬರಲಿಲ್ಲವೇನೋ ಅನಿಸುತ್ತದೆ. ಸ್ಕೇರ್ಸಿಟಿ ಯೋಜನೆಗೆ ಸಂಬಂಧಪಟ್ಟಂತೆ ಮಾಡುವ ಕಾರ್ಯಕ್ರಮಗಳನ್ನು ಜಿಲ್ಲಾಧಿಕಾರಿಗಳು ತಹಸೀಲ್ದಾರ್‌ರವರ ಮುಖಾಂತರ ನೇರವಾಗಿ ಜಿಲ್ಲಾ ಪಂಚಾಯಿತಿ ಮತಿಯಿಂದ ತೆಗೆಸತಕ್ಕ ವ್ಯವಸ್ಥೆ ಇದೆ. ನನ್ನ ಎರಡನೇ ಪ್ರಶ್ನೆ ಎಂದರೆ, ಮಲೆನಾಡಿನಲ್ಲಿ ಕೊಳವೆ ಬಾವಿಗಳು ಸಂಪೂರ್ಣ ವಿಫಲವಾಗುತ್ತಿವೆ. ನಮ್ಮಲ್ಲಿ 300-350 ಅಡಿಯಷ್ಟು ಕೊರೆದರೂ ನೀರು ಸಿಕ್ಕುತ್ತಿಲ್ಲ. ಮೊದಲು ನೀರು ಇದ್ದಂಥ ಬಾವಿಗಳಲ್ಲೂ ನೀರು ಒಣಗಿ ಹೋಗುತ್ತಿದೆ. ನೀರಿನ ತೊಂದರೆ ಇದೆ ಎಂದ ಕೂಡಲೇ ಕೊಳವೆ ಬಾವಿಗಳನ್ನು ತೆಗೆಸುವ ಬದಲು ಬೇರೆ ಬೇರೆ ವಿಧಾನವನ್ನು ಅನುಸರಿಸುವ ವ್ಯವಸ್ಥೆ ನಮ್ಮ ಜಿಲ್ಲೆಯಲ್ಲಿ ಇಲ್ಲ ಎಂದು ಹೇಳುತ್ತಿದ್ದಾರೆ. ನಾನು ಕಳೆದ ಸಾರಿ ಪ್ರಸ್ತಾಪಿಸಿದ್ದೇನೆ. ಆದಕಾರಣ ಕೂಡಲೇ ಸರ್ಕಾರ ಜಿಲ್ಲಾಧಿಕಾರಿಯವರಿಗೆ ಅಥವಾ ಸಂಬಂಧಪಟ್ಟ ಅಧಿಕಾರಿಯವರಿಗೆ ಆದೇಶವನ್ನು ಕಳುಹಿಸಿಕೊಡಬೇಕು.

ಇನ್ನು ಮೂರನೆಯದಾಗಿ ಹೇಳುವುದಾದರೆ, ನಮ್ಮಲ್ಲಿ ಬೋರ್‌ವೆಲ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕೊರೆಯಿಸಿದ್ದಾರೆ. ಆದರೆ ಅವು ಕೆಟ್ಟು ಹೋದಾಗ ಅವುಗಳನ್ನು ರಿಪೇರಿ ಮಾಡುವ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಆಗಲಿಲ್ಲ. ಪಂಚಾಯಿತಿ ಮಟ್ಟದಲ್ಲಾಗಲಿ, ತಾಲ್ಲೂಕು ಮಟ್ಟದಲ್ಲಾಗಲಿ ಅಥವಾ ಜಿಲ್ಲಾ ಮಟ್ಟದಲ್ಲಾಗಲಿ ಇಲ್ಲ. ಇದು ಆಗಬೇಕಾದರೆ ಬೇರೆ ಸೂಕ್ತ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಬೇಕು. ಉದಾಹರಣೆಗೆ ಫೈರ್ ಬ್ರಿಗೇಡ್ ವ್ಯವಸ್ಥೆಯನ್ನು ಏನು ಇಟ್ಟುಕೊಂಡಿದ್ದೀರಿ ಅದೇ ರೀತಿ ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಸುಸಜ್ಜಿತ ವ್ಯವಸ್ಥೆಯುಳ್ಳ ಒಂದು ಯೂನಿಟ್ ಇರಬೇಕು. ಎಲ್ಲೇ ಆಗಲಿ ಕೊಳವೆ ಬಾವಿ ಕೆಟ್ಟು ಹೋಯಿತೆಂದು ದೂರು ಬಂದ ಕೂಡಲೇ ಅಲ್ಲಿಗೆ ಹೋಗಿ ಸರಿಪಡಿಸುವ ವ್ಯವಸ್ಥೆ ಆಗಬೇಕು. ಇಂಥ ದೂರುಗಳು ಬಂದ ಕೇವಲ 2-3 ದಿನದೊಳಗೆ ಸರಿಪಡಿಸುವ ವ್ಯವಸ್ಥೆ ಇರಬೇಕು. ನನಗೆ ತಿಳಿದ ಮಟ್ಟಿಗೆ ಈಗಿರುವ ವ್ಯವಸ್ಥೆಯಲ್ಲಿ 3-4 ತಿಂಗಳಾದರೂ ಕೆಟ್ಟು ಹೋದ ಬಾವಿಗಳನ್ನು ರಿಪೇರಿ ಮಾಡುತ್ತಿಲ್ಲ. ಇವತ್ತು ಕೊಳವೆ ಬಾವಿಗಳ ವ್ಯವಸ್ಥೆ ಅವ್ಯವಸ್ಥೆ ಆಗಿದೆ. ಹಿಂದೆ ಒಂದು ಕಾಲದಲ್ಲಿ ಕೊಳವೆ ಬಾವಿ ಕೊರೆಯುವ ವ್ಯವಸ್ಥೆಯಲ್ಲಿ ಏನೊಂದು ಅತ್ಯಂತ ಒಳ್ಳೆಯ ಹೆಸರನ್ನು ತೆಗೆದುಕೊಂಡಿತ್ತು, ಅದು ಇವತ್ತು ಏನಾಗಿದೆ ಎಂದರೆ ಕೊಳವೆ ಬಾವಿ ಎಂದರೆ ಜನರು ದೂರಿ ಹೋಗುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಕೆಟ್ಟು ಹೋದ ಕೊಳವೆ ಬಾವಿಗಳ ರಿಪೇರಿ ವ್ಯವಸ್ಥೆಯನ್ನು ಬೇರೆ ಯಾವುದಾದರೂ ರೀತಿಯಲ್ಲಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಪ್ಪನವರು ಹೇಳಿರುವುದರಲ್ಲಿ ಒಂದು ವಿಚಾರ ಸರಿಯಾಗಿದೆ. ಮಲೆನಾಡು ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ಕೊರೆದರೆ ಅದರಿಂದ ಪ್ರಯೋಜನವಾಗುವುದಿಲ್ಲ. ನೀರು ಸಿಕ್ಕುವುದಿಲ್ಲ. ಎಲ್ಲಿ ಕೊಳವೆ ಬಾವಿಗಳನ್ನು ಕೊರೆದಾಗ ನೀರು ಸಿಕ್ಕುವುದಿಲ್ಲ ಅಂಥ ಭಾಗಗಳಲ್ಲಿ ತೆರೆದ ಬಾವಿಗಳನ್ನು ತೋಡುವುದಕ್ಕೆ ಜಿಲ್ಲಾ ಪಂಚಾಯಿತಿಗಳಿಗೇ ಸರ್ಕಾರ ಅಧಿಕಾರವನ್ನು ಕೊಟ್ಟಿದೆ. ಆ ಕೆಲಸವನ್ನು ಜಿಲ್ಲಾ ಪಂಚಾಯಿತಿಯವರು ಮಾಡುತ್ತಿದ್ದಾರೆ. ಬಹುಶಃ ಮಾನ್ಯ ಸದಸ್ಯರೂ ಕೂಡ ಜಿಲ್ಲಾ ಪಂಚಾಯಿತಿ ಮುಖಾಂತರ ಮಾಡಿಸಿಕೊಳ್ಳುವುದಕ್ಕೆ ಅವಕಾಶ ಇದೆ.

ಇನ್ನು ಎರಡನೆಯದಾಗಿ, ಸ್ಕೇರ್ಸಿಟಿ ಯೋಜನೆಯಲ್ಲಿ ಕೊಡುವ ಹಣವನ್ನು ಜಿಲ್ಲಾಧಿಕಾರಿಯವರಿಗೆ ಕೊಡಲಾಗಿದೆ. ಈಗ ಮಾನ್ಯ ಕಂದಾಯ ಮಂತ್ರಿಗಳು ಜಿಲ್ಲಾಧಿಕಾರಿಯವರಿಗೆ ನೀವು ಶಾರ್ಟ್ ಟೆಂಡರನ್ನು ಕರೆದು ಕೊಳವೆ ಬಾವಿಗಳನ್ನು ಕೊರೆಯುವುದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಕಾರಣ ಎಂದರೆ, ಕೆಲವು ಸಂದರ್ಭಗಳಲ್ಲಿ 220-240 ರೂ. ಎಂದು ಕ್ರಮ ಏನಿದೆ ಅದು ಕಡಿಮೆ ಆಗುವ ಸಂಭವ ಕೂಡ ಇದೆ. ಈಗಾಗಲೇ ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡಿದ್ದಾರೆ. ಬಹುಶ: ಮಾನ್ಯ ಸದಸ್ಯರ ಜಿಲ್ಲೆಯಲ್ಲೂ ಈ ಕ್ರಮವನ್ನು ಇಷ್ಟರಲ್ಲೇ ತೆಗೆದುಕೊಳ್ಳಬಹುದೆಂದು ಹೇಳಬಯಸುತ್ತೇನೆ.

ಇನ್ನು ಕೆಟ್ಟು ಹೋದ ಕೊಳವೆ ಬಾವಿಗಳನ್ನು ರಿಪೇರಿ ಮಾಡುವ ವಿಚಾರ. ಜಿಲ್ಲಾ ಪಂಚಾಯಿತಿ ವ್ಯವಸ್ಥೆಯಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯಿತಿಗೂ 2-2 ಲಾರಿಗಳಿದ್ದು ಅದರಲ್ಲಿ ಒಳ್ಳೆಯ ಟೆಕ್ನೀಷಿಯನ್ಸ್ ಇದ್ದಾರೆ, ಯಾವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳು ಕೆಟ್ಟು ಹೋಗಿದೆ ಎಂಬುದನ್ನು ಸಂಬಂಧಪಟ್ಟವರು ಕೂಡಲೇ ಜಿಲ್ಲಾ ಪಂಚಾಯಿತಿಗೆ ತಿಳಿಸಬೇಕಾಗುತ್ತದೆ. ದೂರನ್ನು ನೀಡಿದ ಕೂಡಲೇ ಅದನ್ನು ರಿಜಿಸ್ಟರ್ ಮಾಡಿಕೊಂಡು ಆದ್ಯತೆಯ ಆಧಾರದ ಮೇಲೆ ಈ 2 ಲಾರಿಗಳನ್ನು ಪ್ರತಿದಿನ ಇಂಥಿಂಥ ಕಡೆಗೆ ಹೋಗಬೇಕೆಂದು ವ್ಯವಸ್ಥೆ ಮಾಡಿಕೊಂಡು ಅದರ ಪ್ರಕಾರ ಕೆಲಸ ಮಾಡಲಾಗುತ್ತಿದೆ. ಈ ವ್ಯವಸ್ಥೆ ಮಾನ್ಯ ಸದಸ್ಯರ ಜಿಲ್ಲೆಯಲ್ಲೂ ಇರಬಹುದೆಂದು ಕಾಣಿಸುತ್ತದೆ. ಒಂದು ವೇಳೆ ಇಲ್ಲದೇ ಹೋಗಿದ್ದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು, ಯಾವ ಯಾವ ಭಾಗದಲ್ಲಿ ಕೆಟ್ಟು ಹೋಗಿದೆ, ಅವುಗಳನ್ನು ಕೂಡಲೇ ರಿಪೇರಿ ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

ಡಾ॥ ಯು.ಚಿತ್ತರಂಜನ್:- ಮಾನ್ಯ ಅಧ್ಯಕ್ಷರೆ, ಜನರಲ್ ಆಗಿ.....

ಅಧ್ಯಕ್ಷರು:- ಇದು ಸಕಲೇಶಪುರದ್ದು. ಜನರಲ್ ಆಗಿದ್ದಾಗ ಕೇಳಿ. ಇದು ಮಾನ್ಯ ಶಿವಪ್ಪನವರಿಗೆ ಸಂಬಂಧಪಟ್ಟಿದ್ದು. ಅವರು ಸಕಲೇಶಪುರದ ವಿಚಾರ ಬಿಟ್ಟು ಬೇರೆ ವಿಚಾರ ಮಾತನಾಡುತ್ತಿಲ್ಲ.

ಡಾ॥ ಯು.ಚಿತ್ತರಂಜನ್:- ನಮ್ಮ ಕರಾವಳಿ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ಕೊರೆಯುವ ಸಂದರ್ಭ ಎಂಥಾದ್ದು ಎಂದರೆ ಅವರು ಜೂನ್ ತಿಂಗಳಲ್ಲಿ ಕೊರೆಯುತ್ತಾರೆ ಆ ಸಂದರ್ಭದಲ್ಲಿ ನೀರಿನ ಮಟ್ಟ ಮೇಲುಗಡೆಯೇ ಇರುವುದರಿಂದ ಕೊಳವೆ ಬಾವಿ ಫಲಪ್ರದವಾಯಿತೆಂದು ಮುಗಿಸಿ ಹೋಗುತ್ತಾರೆ. ಆನಂತರ ಮಳೆಗಾಲ ಮುಗಿದ ಮೇಲೆ ಆ

ಬಾವಿಗಳಲ್ಲಿ ನೀರೇ ಇರುವುದಿಲ್ಲ. ಮೊದಲನೆಯದಾಗಿ ಇವರು ಕೊರೆದಂಥ ಬಾವಿ ಎಷ್ಟು ಆಳ ಇದೆ ಎಂಬುದನ್ನು ಪರಿಶೀಲಿಸುವ ಸರಿಯಾದ ವ್ಯವಸ್ಥೆ ಇಲ್ಲ. ಕೊರೆದವರು ಏನು ಬಿಲ್ಲು ಅಥವಾ ರಿಪೋರ್ಟನ್ನು ನೀಡುತ್ತಾರೆ ಅದಕ್ಕೆ ಹಣವನ್ನು ಪಾವತಿ ಮಾಡಿಬಿಡುತ್ತಾರೆ. ಆದರೆ ಅವರು ಎಷ್ಟು ಆಳ ಕೊರೆದಿದ್ದಾರೆ, ಎಷ್ಟು ಖರ್ಚಾಗಿದೆ ಎಂಬುದನ್ನು ಪರಿಶೀಲಿಸುವ ಸರಿಯಾದ ವ್ಯವಸ್ಥೆ ಇಲ್ಲ. ನಮ್ಮ ಜಿಲ್ಲೆಯ ಸಂಬಂಧಪಟ್ಟ ಉಸ್ತುವಾರಿ ಸಚಿವರು ಏನೆಂದು ಸೂಚನೆಯನ್ನು ಕೊಟ್ಟರು ಅದು ಆರ್ಡರ್ ಏನೂ ಅಲ್ಲ. ಅಲ್ಲಿರುವಂಥ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಈ ಕೊರೆದ ಬಾವಿ ಎಷ್ಟು ಆಳ ಇದೆ, ನೀರು ಬಂದಿದೆಯೇ ಇಲ್ಲವೆ, ಎಂಬುದನ್ನು ಪರಿಶೀಲಿಸಿ ಒಂದು ಕಂಪ್ಲೀಷನ್ ರಿಪೋರ್ಟನ್ನು ಕೊಡಬೇಕಾಗಿದೆ. ಆದರೆ, ಸಂಬಂಧಪಟ್ಟ ಪಂಚಾಯಿತಿ ಅಧ್ಯಕ್ಷರಾಗಿರುವಂಥ ಅನೇಕರಿಗೆ ಟೆಕ್ನಿಕಲ್ ಪರಿಣತಿ ಇರುವುದಿಲ್ಲ; ಇದರ ಬಗ್ಗೆ ಸರ್ಕಾರ ಏನು ವ್ಯವಸ್ಥೆ ಮಾಡುವುದಕ್ಕೆ ಇಚ್ಛಿಸಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕೆಂದು ಕೋರುತ್ತೇನೆ.

★**ಶ್ರೀ ಎಂ.ಪಿ.ನಾಣಯ್ಯ:-** ಮಾನ್ಯ ಅಧ್ಯಕ್ಷರೆ, ಕೊಳವೆ ಬಾವಿಗಳನ್ನು ಕೊರೆಯುವುದು ಮಳೆಗಾಲದಲ್ಲಿ. ಆದರೆ ಆಗ ವಾಟರ್ ಟೇಬಲ್ ಮೇಲ್ಭಾಗದಲ್ಲೇ ಇರುತ್ತದೆ. ಆದರೆ ಸರ್ಫೇಸ್ ವಾಟರ್‌ಗೂ ಗ್ರೌಂಡ್ ವಾಟರ್‌ಗೂ ಪರಸ್ಪರ ಸಂಬಂಧ ಇಲ್ಲ. ಮಳೆಗಾಲದಲ್ಲಿ ಸರ್ಫೇಸ್ ವಾಟರ್ ಮೇಲೆ ಬರಬಹುದು. ಆದರೆ ನೀರಿನ ಮಟ್ಟ ಸರಿಯಾಗಿದ್ದಾಗ ಗ್ರೌಂಡ್ ವಾಟರ್ ಲೆವೆಲ್ ಕೂಡ ಏರುತ್ತದೆ. ಮಲೆನಾಡು ಪ್ರದೇಶದಲ್ಲಿ ಕೆಲವು ಸಾರಿ 200 ರಿಂದ 250 ಅಡಿ ಆಳದವರೆಗೂ ಕೊರೆಯಬೇಕಾಗುತ್ತದೆ. ನಮ್ಮ ಕೊಡಗಿನ ಕೆಲವು ಭಾಗಗಳಲ್ಲಿ 250 ರಿಂದ 300 ಅಡಿ ಆಳದವರೆಗೆ ಕೊರೆದರೂ ನೀರು ಸಿಕ್ಕದೇ ಇರುವ ಪರಿಸ್ಥಿತಿ ಇದೆ. ಆದರೆ ಇಲ್ಲಿ ಮುಖ್ಯ ವಿಚಾರ ಎಂದರೆ ಆ ಕೊಳವೆ ಬಾವಿಯನ್ನು ಎಷ್ಟು ಆಳ ಕೊರೆದಿದ್ದಾರೆಂಬುದು. ಅದನ್ನು ಯಾವ ಏಜೆನ್ಸಿ ಮುಖಾಂತರ ಕೊರೆದಿದ್ದಾರೆ. ಜಿಲ್ಲಾ ಪಂಚಾಯಿತಿ ಮೂಲಕ ಕೊರೆದರೆ ಜಿಲ್ಲಾ ಪಂಚಾಯಿತಿಯವರೇ ಅದನ್ನು ನೋಡಿಕೊಳ್ಳಬೇಕಾಗುತ್ತದೆ. ಅಲ್ಲಿರತಕ್ಕ ಅಧಿಕಾರಿಗಳು ಆ ಬಾವಿಯನ್ನು ಎಷ್ಟು ಆಳವಾಗಿ ಕೊರೆಯಲಾಗಿದೆ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಪಿ.ಹೆಚ್.ಇ.ಮೂಲಕ ಕೊರೆದಿದ್ದರೆ, ಅವರೇ ಅದನ್ನು ಮಾಡಬೇಕಾಗುತ್ತದೆ. ಬಹುಶಃ ನಿಮ್ಮ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ವ್ಯಾಪ್ತಿಯಲ್ಲಿ ಬರಬಹುದು. ಆಗ ನಾವು ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೂ ಈ ಅಧಿಕಾರವನ್ನು ಕೊಡಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ 160 ಅಡಿ ಕೊರೆದಾಗ ನೀರು ಬಂದಿತು ಎಂದು ಅಷ್ಟಕ್ಕೆ ಬಿಟ್ಟು 200 ಅಡಿ ಕೊರೆದಿದೆ ಎಂದು ತೋರಿಸಿ ಹಣ ತೆಗೆದುಕೊಂಡಿರುವುದೂ ಇದೆ. ಕೆಲವು ಸಂದರ್ಭದಲ್ಲಿ ಅಲ್ಲಿಯ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಜೋರಾಗಿದ್ದು ಅವರೇ ಮುಂದೆ ನಿಂತು ಈ ಬಾವಿಯನ್ನು ಕೊರೆಸಿದರೆ ಹಣ ಪೋಲಾಗುವುದನ್ನು ಕೂಡ ತಡೆಹಿಡಿಯುವುದಕ್ಕೆ ಅವಕಾಶ ಇದೆ. ಇದು ಅವರ ಜವಾಬ್ದಾರಿ ಕೂಡ ಇದೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಇಂಥ ಒಂದು ಜವಾಬ್ದಾರಿ ಇರಬೇಕಾಗಿದೆ. ಅವರಿಗೆ ಈ ಅಧಿಕಾರವನ್ನು ಕೊಡಬೇಕೆಂಬುದೂ ಕೂಡ ನಮ್ಮ ಈ ಕಾಯಿದೆಯ ಮೂಲ ಉದ್ದೇಶ. ಒಂದು ವೇಳೆ ಎಲ್ಲಾದರೂ ತಪ್ಪಾಗಿದ್ದರೆ, ಅದನ್ನು ನಿರ್ದಿಷ್ಟವಾಗಿ ನಮ್ಮ ಗಮನಕ್ಕೆ ತಂದರೆ, ಕ್ರಮ ತೆಗೆದುಕೊಳ್ಳೋಣ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಚಿತ್ತರಂಜನ್ ರವರು ಹೇಳಿರುವಂತಹ ಮಾತು ಸತ್ಯ.

ಅನೇಕ ಸಂದರ್ಭದಲ್ಲಿ ಜೂನ್ ತಿಂಗಳಲ್ಲೂ ಬಂದು ಕೊರೆದು ಹೋಗುತ್ತಾರೆ. ಆ ಸಂದರ್ಭದಲ್ಲಿ ಮಳೆ ಬರುತ್ತಿರುವುದರಿಂದ ಅವರು ರಸ್ತೆಯನ್ನು ಬಿಟ್ಟು ಕೆಳಗೆ ಹೋಗಿ ಕೊರೆಯುವುದಿಲ್ಲ. ಕೇವಲ ರಸ್ತೆ ಪಕ್ಕದಲ್ಲೇ ನಿಲ್ಲಿಸಿ ಕೊರೆಯುತ್ತಾರೆ. ಆಗ ಮೇಲ್ಭಾಗದಲ್ಲೇ ನೀರು ಸಿಕ್ಕುತ್ತದೆ. ಇನ್ನೊಂದು ವಿಚಾರ ಈ ರೀತಿ ಬೋರ್‌ವೆಲ್‌ಗಳನ್ನು ತೋಡುವವರೆಲ್ಲಾ ರಾತ್ರಿ ಹೊತ್ತೇ ಈಬಂದು ತೋಡಿ ಹೊರಟು ಹೋಗುತ್ತಾರೆ. ಯಾರು ಎಲ್ಲಿ ತೋಡುತ್ತಾರೆ ಎಂಬುದನ್ನು ನೋಡಬೇಕಾದರೆ ನಮ್ಮ ಜೊತೆ ಬಂದರೆ ತೋರಿಸುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳ ಮಧ್ಯದಲ್ಲೇ ಲಾರಿಗಳನ್ನು ನಿಲ್ಲಿಸಿ ಅಲ್ಲೇ ಕೊಳವೆ ಬಾವಿ ತೋಡಿ ಹೋಗಿರತಕ್ಕದ್ದು ಇದೆ. ಆನಂತರ ಆ ರಸ್ತೆಯನ್ನು ಬೇರೆ ಕಡೆ ಮಾಡಿಕೊಳ್ಳಬೇಕಾಗಿದೆ. ತಾಲೂಕು ಪಂಚಾಯಿತಿ ಗಮನಕ್ಕೆ ಅಥವಾ ಜಿಲ್ಲಾ ಪಂಚಾಯಿತಿ ಗಮನಕ್ಕೂ ಕೂಡ ಬರುವುದಿಲ್ಲ. ಆದರೆ ಆ ಕೊರೆದ ಬಾವಿಗೆ ಯಾವ ರೀತಿ ಅವರು ಬಿಲ್ ಮಾಡಿ ಹಣವನ್ನು ತೆಗೆದುಕೊಂಡು ಹೋಗುತ್ತಾರೆ ಎಂಬುದು ನಮಗೆ ಯಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದ ಇಂಥಾದ್ದರ ಮೇಲೆ ಹಿಡಿತವನ್ನು ಇಟ್ಟುಕೊಳ್ಳುವ ವ್ಯವಸ್ಥೆಯನ್ನು ತಾಲ್ಲೂಕು ಪಂಚಾಯಿತಿಯವರಿಗಾಗಲಿ, ಜಿಲ್ಲಾ ಪಂಚಾಯಿತಿಯವರಿಗಾಗಲಿ ವಹಿಸುವುದು ಅವಶ್ಯಕವಾಗಿದೆ.

ಶ್ರೀ ಕುಂಬ್ಳೆ ಸುಂದರರಾವ್:- ಹಗಲು ಹೊತ್ತು ಒಂದು ಸ್ಥಳವನ್ನು ತೋರಿಸುತ್ತಾರೆ. ಆದರೆ ರಾತ್ರಿ ಇನ್ನೆಲ್ಲೋ ಹೋಗಿ ಕೊರೆಯುತ್ತಾರೆ. ಅಲ್ಲಿ ಬಾವಿ ಇರುತ್ತದೆ, ಆದರೆ ಜನ ಇರುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ:- ರಾತ್ರಿ ಹೊತ್ತು ಬೋರ್‌ವೆಲ್ ಅನ್ನು ತೆಗೆಯಕೂಡದೆಂದು ಏನೂ ಇಲ್ಲ.

ಶ್ರೀ ಕುಂಬ್ಳೆ ಸುಂದರ ರಾವ್:- ಯಾವಾಗಲೂ ರಾತ್ರಿ ಹೊತ್ತೇ ಕೊರೆಯುವುದು. ರಾತ್ರಿ ಹೊತ್ತೇ ಕೊರೆಯಬೇಕೆಂದು ಸರ್ಕಾರದ ಆದೇಶವೇನಾದರೂ ಇದೆಯೇ?

ಅಧ್ಯಕ್ಷರು:- ಅಂದರೆ, ಸರ್ಕಾರ ಹಗಲೂ-ರಾತ್ರಿ ಕೆಲಸ ಮಾಡುತ್ತಿದೆ ಎಂದು ಅದರ ಅರ್ಥ.

ಡಾ॥ ಯು.ಚಿತ್ತರಂಜನ್:- ಗ್ರಾಮದಲ್ಲಿ ರಾಜಕೀಯ ಪಕ್ಷಗಳಿರುತ್ತವೆ, ಜನತಾ ದಳ ಆಗಲಿ, ಬಿ.ಜೆ.ಪಿ. ಆಗಲಿ, ಕಾಂಗ್ರೆಸ್ ಆಗಲಿ, ಅವರಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರೊಬ್ಬರು, ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಶಾಸಕರು ಇನ್ನೊಬ್ಬರು, ಎಂ.ಪಿ. ಮತ್ತೊಬ್ಬರು ಹೀಗೆ ಇದ್ದರೆ, ಅವರವರ ಪೈಪೋಟಿಯಲ್ಲಿ ಇವರು ಯಾವ ಹಿಡಿತದಲ್ಲಿರುತ್ತಾರೋ ಅಲ್ಲಿಗೆ ಬಂದು ರಾತ್ರಿ ಕೊರೆದು ಬಿಟ್ಟು ಹೋಗಿಬಿಡುತ್ತಾರೆ ಅಷ್ಟೆ. ನಮ್ಮಲ್ಲಿ ಸುಮಾರು 60 ಬಾವಿಗಳನ್ನು ಅರ್ಧಕ್ಕೇ ನಿಲ್ಲಿಸಿ ಹೊರಟು ಹೋಗಿದ್ದಾರೆ.

★**ಶ್ರೀ ಎಂ.ಸಿ.ನಾಣಯ್ಯ:-** ಇದು ರಾಜಕೀಯ ಪಕ್ಷದ ವ್ಯಕ್ತಿಗಳ ಆಧಾರದ ಮೇಲೆ ರಾತ್ರಿ ಬೆಳಿಗ್ಗೆ ತೆಗೆಯುತ್ತಾರೆ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸತ್ಯಕ್ಕೆ ಹತ್ತಿರವೋ, ಸತ್ಯಕ್ಕೆ ದೂರವೋ ಅದನ್ನು ನಾನು ಈಗ ಹೇಳುವುದಕ್ಕೆ ತಯಾರಾಗಿಲ್ಲ. ಆದರೆ ಯಾವುದಾದರೂ ಜಿಲ್ಲೆಯಲ್ಲಿ ಕೊಳವೆ ಬಾವಿ ತೆಗೆಯಬೇಕೆಂದು ತೀರ್ಮಾನ ಮಾಡಿದರೆ, ಇಷ್ಟು ಕೊಳವೆ ಬಾವಿಗಳನ್ನು ತೆಗೆಯಬೇಕೆಂದು ಒಂದು ಟೈಮ್ ಫಿಕ್ಸ್ ಮಾಡಿ ಯಾವ ಏಜೆಂಟ್‌ಗೆ ಕೊಡುತ್ತೇವೆ ಆ ಏಜೆಂಟರು ಆ ಕೆಲಸವನ್ನು ಮಾಡಬೇಕಾಗುತ್ತದೆ. ಒಂದು ಬೋರ್‌ವೆಲ್ ಡ್ರಿಲ್ ಮಾಡುವುದಕ್ಕೆ ಇರತಕ್ಕ ಲಾರಿ ಬಂದರೆ 2-3 ಬೋರ್‌ವೆಲ್‌ಗಳನ್ನು ಕೊರೆಯುತ್ತಾರೆ. ಅವರು ಆ ಕೆಲಸ ಮಾಡುವುದಕ್ಕೆ ಹಗಲು ರಾತ್ರಿ ಕೆಲಸ

ಮಾಡಿಕೊಡುತ್ತಾರೆ. ನನ್ನ ಜಿಲ್ಲೆಯಲ್ಲಿ ನಾನು ಹೇಳುತ್ತಿದ್ದೇನೆ, ಬೆಳಿಗ್ಗೆ ಒಂದು ತೆಗೆಯುತ್ತಾರೆ, ರಾತ್ರಿ ಒಂದು ತೆಗೆಯುತ್ತಾರೆ. ಬಹುಶಃ ನೀವು ಹೇಳಬಹುದು, ಏತಕ್ಕೆ ಇವೆಲ್ಲ ಮಾಡುತ್ತಿರತಕ್ಕದ್ದು ಎಂದು. ಜಿಲ್ಲಾ ಪಂಚಾಯಿತಿ ವತಿಯಿಂದ ಜಿಲ್ಲಾ ಪಂಚಾಯಿತಿಯಲ್ಲಿರತಕ್ಕ ಅಧಿಕಾರಿಗಳು ಮಾನಿಟರ್ ಮಾಡಬೇಕಾಗುತ್ತದೆ, ಜಿಲ್ಲಾಧಿಕಾರಿಗಳ ಮೂಲಕ ಆದರೆ ಜಿಲ್ಲಾಧಿಕಾರಿಗಳು ಮಾನಿಟರ್ ಮಾಡಬೇಕಾಗುತ್ತದೆ. ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಮೂಲಕ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಇಲಾಖಾ ಅಧಿಕಾರಿಗಳು ಮಾನಿಟರ್ ಮಾಡಬೇಕಾಗುತ್ತದೆ. ಆದುದರಿಂದ ರಾತ್ರಿ ತೆಗೆದರೆ ಅದಕ್ಕೆ ಲೆಕ್ಕ ಇರುವುದಿಲ್ಲ, ಬೆಳಿಗ್ಗೆ ತೆಗೆದರೆ ಮಾತ್ರ ಲೆಕ್ಕ ಇರುತ್ತದೆಂದು ಹೇಳತಕ್ಕ ವಾದ ಯಾವುದು ಇದೆ, ಇದು ಸರಿಯಲ್ಲ. ನೀರನ್ನು ಒಟ್ಟಾರೆ ಜನರಿಗೆ ಕೊಡಬೇಕೆಂಬ ಕಳಕಳಿಯಿಂದ ಡ್ರಿಲಿಂಗ್ ಮೆಷಿನ್ಸ್ ಬಂದಾಗ, ಅದರ ಅವಶ್ಯಕತೆಯ ಆಧಾರದ ಮೇಲೆ ಅದನ್ನು ಕೂಡಲೇ ಮಾಡಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ರಾತ್ರಿ ಮಾಡಿದರೆ ತಪ್ಪೇನು ಇಲ್ಲ. ರಾತ್ರಿ ಮಾಡಿದರೆ ಕಳ್ಳತನ ನಡೆಯುತ್ತದೆಂದು ಹೇಳತಕ್ಕ ನಿಮ್ಮ ವಿಚಾರ ಯಾವುದು ಇದೆ ಅದು ಸರಿಯಲ್ಲ..... (ಗೊಂದಲ)

ಡಾ॥ ಎಂ.ಪಿ.ಕರ್ಕಿ:- ಅವರು ರಾತ್ರಿ ತೆಗೆದು ಹೋಗುತ್ತಾ ಇರುತ್ತಾರೆ.....

(ಗೊಂದಲ)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ನೀವು ನಮ್ಮ ಕಾಳಜಿಯನ್ನು ಅರ್ಥ ಮಾಡಿಕೊಂಡಿಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಅಳತೆ ಮಾಡಿ ಎಷ್ಟು ತೆಗೆದಿದ್ದಾರೆ, ನೀರು ಬರುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ರಾತ್ರಿ ತೆಗೆದರೆನೀರು ಬರುತ್ತದೆಯೋ ಇಲ್ಲವೋ ಎಂದು ಊರಿನವರಿಗೆ ಹೇಗೆ ಗೊತ್ತಾಗಬೇಕು ಸ್ವಾಮಿ?

ಶ್ರೀಮತಿ ಪ್ರಮೀಳಾ ನೇಸರ್ಗಿ:- ಜನರು ಸಮಾಧಾನದಿಂದ ಏಕೆ ನಿದ್ದೆ ಮಾಡಬೇಕು. ಅವರು ನಿದ್ದೆಗೆಡಲಿ ಎಂದು ತೆಗೆಯುತ್ತೀರಿ.

ಅಧ್ಯಕ್ಷರು:- ನಿದ್ದೆಗೆಡಿಸುವುದಕ್ಕೆ ರಿಗ್ ಬರಬೇಕೆ? ನೀವೆಲ್ಲ ಇಲ್ಲವೆ? ಒಳ್ಳೆಯ ಕಥೆ ಆಯಿತಲ್ಲ.....

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹೇಳತಕ್ಕ ಒಂದು ವಿಚಾರವನ್ನು ಒಪ್ಪಬೇಕು. ಮಲೆನಾಡು ಪ್ರದೇಶದಲ್ಲಿ ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ಮಳೆ ಹೆಚ್ಚು ಬರತಕ್ಕ ಸಂದರ್ಭದಲ್ಲಿ ಬೋರ್‌ವೆಲ್ ತೆಗೆಯತಕ್ಕದ್ದು ಯಾವುದು ಇದೆ ಅದನ್ನು ಸ್ವಲ್ಪ ಮಟ್ಟಿಗೆ ನಿಲ್ಲಿಸಿದರೆ ಉತ್ತಮ ಎಂದು ಹೇಳತಕ್ಕ ತಮ್ಮ ಸಲಹೆಯನ್ನು ಒಪ್ಪುತ್ತೇನೆ. ಏಕೆಂದರೆ ವಾಟರ್ ಟೇಬಲ್ ಬಹಳ ಹೈ ಇರುತ್ತದೆ. ಬಹುಶಃ ಅಂಥ ಅವಶ್ಯಕತೆ ಇದ್ದ ಪ್ರದೇಶದಲ್ಲಿ ತೆಗೆಯಬೇಕೇ ಹೊರತು ಮಾಮೂಲಾಗಿ ಸಾಮಾನ್ಯವಾಗಿ ತೆಗೆಯತಕ್ಕ ವಿಚಾರ ಯಾವುದು ಉಂಟು ಅದನ್ನು ಇಲಾಖೆಯ ಅಧಿಕಾರಿಗಳಿಗೆ ಹೇಳುತ್ತೇನೆ, ಜಿಲ್ಲಾ ಪಂಚಾಯಿತಿಗೆ ಹೇಳಿ ಬಹುಶಃ ಮಳೆಗಾಲದ ಸಂದರ್ಭದಲ್ಲಿ 2-3 ತಿಂಗಳು ಕೊಳವೆ ಬಾವಿಯ ಅವಶ್ಯಕತೆ ಇರುವುದಿಲ್ಲ. ಅದನ್ನು ಖಂಡಿತವಾಗಿ ನಾವು ಇಲಾಖೆಯಿಂದ ವಿಚಾರ ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಎಲ್ಲರೂ ಹೇಳುವುದನ್ನು ನಾನು ಗಮನಿಸುತ್ತಿದ್ದೆ. ರಿಗ್ ಆಪರೇಟರ್ಸ್‌ಗೆ ಪ್ರೈವೇಟ್ ಡ್ರಿಲಿಂಗ್ ಮಾಡಿದರೆ ಸಿಗುವ ಹಣಕ್ಕೂ ಸರ್ಕಾರದ ಕೆಲಸ ಮಾಡಿದರೆ ಸಿಗುವ ಹಣಕ್ಕೂ

ಬಹಳ ವ್ಯತ್ಯಾಸ ಇದೆ. ಕೇಸಿಂಗ್ ಪೈಪಿಗೆ ನೀವು ಕೊಡತಕ್ಕ ಹಣ ಬಹಳ ಜಾಸ್ತಿಯಾಗುತ್ತದೆ. ಸರ್ಕಾರದಲ್ಲಿ ಸಾಕಷ್ಟು ರಿಗ್‌ಗಳು ಇಲ್ಲ. ಖಾಸಗಿಯವರಿಗೆ ಒಪ್ಪಿಸಿದಾಗ ಅವರು ಜನರ ಕಣ್ಣು ತಪ್ಪಿಸಿ ಹೋಗಿ 150 ಅಡಿ ಕೊರೆದಿದ್ದರೆ 250 ಅಡಿ ಲೆಕ್ಕ ಹಾಕುತ್ತಾರೆ. 30 ಅಡಿ ಕೇಸಿಂಗ್ ಪೈಪು ಹಾಕಿದ್ದರೆ 45 ಅಡಿ ಕೇಸಿಂಗ್ ಪೈಪ್ ಲೆಕ್ಕ ಬರೆಯುತ್ತಾರೆ. ಸರ್ಕಾರದ ಹಣವನ್ನು ಈ ರೀತಿ ದುರುಪಯೋಗ ಮಾಡಿ ತೆಗೆದುಕೊಳ್ಳುವ ಬಗ್ಗೆ ಕೆಲವರು ಕೆಳ ಮಟ್ಟದಲ್ಲಿರತಕ್ಕ ಅಧಿಕಾರಿಗಳು ಶಾಮೀಲಾಗಿ ಮಾಡುತ್ತಾರೆಂಬುದು ಅವರೆಲ್ಲರ ಅಭಿಪ್ರಾಯ. ಅದನ್ನು ಸರಿಯಾಗಿ ಹೇಳುವುದಕ್ಕೆ ಬರಲಿಲ್ಲ, ನಾನು ಹೇಳಬೇಕು ನಿಮ್ಮ ಪರವಾಗಿ. ಇದು ಅವರ ಅಭಿಪ್ರಾಯ, ನನ್ನದಲ್ಲ. ಆದುದರಿಂದ ಜನರ ಕಣ್ಣು ತಪ್ಪಿಸಿ ಸಾರ್ವಜನಿಕವಾಗಿ ಕೆಲಸಕ್ಕೆ ಸರ್ಕಾರದ ಹಣ ವ್ಯಯ ಮಾಡತಕ್ಕದ್ದು, ಜನರ ಕಣ್ಣು ತಪ್ಪಿಸಿ ಮಾಡುವ ಕೆಲಸದ ಬಗ್ಗೆ ನಿಗಾ ಇಡಬೇಕೆಂಬುದು ಅವರ ಅಪೇಕ್ಷೆ.

ಶ್ರೀ ಡಿ.ಎ. ಸದಾನಂದಗೌಡ:- ಅವರು ಅಲ್ಲಿ ಬಂದು ಬಾವಿ ತೆಗೆಯುವ ಸಂದರ್ಭದಲ್ಲಿ ಪೂರ್ವ ಸೂಚನೆಯಾಗಿ ತಿಳವಳಿಕೆ ಕೊಡತಕ್ಕ ಕೆಲಸ ಮಾಡಿದರೆ ಸರಿಯಾಗುತ್ತದೆ.

ಅಧ್ಯಕ್ಷರು:- ಊರಿನಲ್ಲಿ ಆಗಿದೆ, ನೀವು ಎಲ್ಲಿಗೋ ಹೋಗುತ್ತೀರಿ?

ಶ್ರೀ ಎಂ.ಸಿ.ನಾಣಯ್ಯ:- ಬಹುಶಃ ಏನಾದರೂ ಅವ್ಯವಹಾರಗಳು ನಡೆದಿದ್ದರೆ ಇದರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ. ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಇದ್ದರೆ ಕೊಡಲಿ.

ಶ್ರೀ ವಾಟಾಳ್ ನಾಗರಾಜ್:- ಈ ಇಲಾಖೆಗೆ ಸಂಬಂಧಪಟ್ಟ ಸಚಿವರಾದ ಶ್ರೀ ಪ್ರಕಾಶ್ ಅವರು ಇದುವರೆಗೆ ಕೊರೆದು ಕೊರೆದು ಸಾಕಾಯಿತು. ಈ ಕೊರೆತವನ್ನು ನಾಣಯ್ಯನವರು ತೆಗೆದುಕೊಂಡಿದ್ದಾರೆ. ಇವರು ಕೊರೆದು ಕೊರೆದು ನಮ್ಮ ಕಥೆ ಮುಗಿಸಿದ್ದಾರೆ. ಕೊರೆಯುವುದು ಎಂದು ಹೇಳುತ್ತಾರೆ, ತಮಗೆ ಗೊತ್ತಲ್ಲ, ಸಾಕಪ್ಪ ನಿಮ್ಮ ಕೊರೆತ ನಿಲ್ಲಿಸಿ ಎಂದು. ನಾನು ತಮಗೆ ಹೇಳುತ್ತಿದ್ದೇನೆ, ನನ್ನ ಕ್ಷೇತ್ರ ಒಂದರಲ್ಲೇ 120 ಕೊಳವೆ ಬಾವಿಗಳು ಕೆಟ್ಟು ಸುಮಾರು ಎರಡೂವರೆ ತಿಂಗಳಾಯಿತು. ಇದನ್ನು ರಿಪೇರಿ ಮಾಡುವುದಕ್ಕೆ ಸರ್ಕಾರಕ್ಕೆ ಮನಸ್ಸಿಲ್ಲ. ಬರೀ ಇಲ್ಲಿ ನಿಂತುಕೊಂಡು ಉಪದೇಶ ಹೇಳುತ್ತೀರಿ. ಯಾರಿಗೆ ಬೇಕು ನಿಮ್ಮ ಉಪದೇಶ. ನಾಳೆ ನಾವು ಊರಿಗೆ ಹೋದರೆ ಹಳ್ಳಿಗೆ ಹೋಗುವುದಕ್ಕಾಗುವುದಿಲ್ಲ, ಬೀದಿಗೆ ಹೋಗುವುದಕ್ಕಾಗುವುದಿಲ್ಲ. ತಾವು ಮಂತ್ರಿಗಳಾಗಿರುತ್ತೀರಿ, ತಾವು ಆರಾಮವಾಗಿ ಕಾರಿನಲ್ಲಿ ಹೋಗಿ ಸುತ್ತಾಡಿಕೊಂಡು ಬರುತ್ತೀರಿ. ನಾವು ಜನರ ಹತ್ತಿರ ಹೋದರೆ ಗೌರವ ತೆಗೆಯುತ್ತಾರೆ, ಮಾನ ಮರ್ಯಾದೆ ತೆಗೆಯುತ್ತಾರೆ. ಈ ಪರಿಸ್ಥಿತಿ ನಮ್ಮದು ನಿರ್ಮಾಣವಾಗಿದೆ. ನನ್ನ ಕ್ಷೇತ್ರ ಒಂದರಲ್ಲೇ, ನಾನು ಬಹಳ ದುಃಖದಿಂದ ಈ ಮಾತು ಹೇಳುತ್ತಿದ್ದೇನೆ, ಇನ್ನು ನಿಜವಾಗಿ ಇರುವುದು ಎರಡು ತಿಂಗಳು. ಎರಡು ತಿಂಗಳಲ್ಲಿ ಎಲ್ಲೆಲ್ಲಿ ಕೊಳವೆ ಬಾವಿ ಕೆಟ್ಟಿದೆ, ಎಲ್ಲೆಲ್ಲಿ ನೀರಿಲ್ಲ ಅದಕ್ಕೆ ನಿಮ್ಮಲ್ಲಿ ತಕ್ಷಣಕ್ಕೆ ವಿಶೇಷವಾದ ಯೋಜನೆ ಏನೂ ಇಲ್ಲ. ನೀವು ಬರೀ ಮಾತನಾಡುತ್ತೀರಿ, ಬರೀ ಮಾತಿನಲ್ಲಿ ಮುಗಿಸುತ್ತಿದ್ದೀರಿ. ಇವತ್ತು ನಮಗೆ ಕೊನೆಯ ದಿನವಾಗಿದೆ. ನಿಮ್ಮ ಸ್ಪಷ್ಟ ನಿರ್ಧಾರ ನಿಲುವು ಗೊತ್ತಾಗಲಿಲ್ಲವೆಂದರೆ ಬರೀ ನೀವು ಉಪದೇಶ ಹೇಳುವುದು ಬೇಡ ನಾನು ಕೇಳುವುದಿಲ್ಲ. ನಾನು ಧರಣಿ ಕುಳಿತುಕೊಳ್ಳುತ್ತೇನೆ. ಕೊನೇ ದಿವಸ ಉಳಿದಿರುವುದು, ನಾನು ತಮಗೆ ಕೈ ಮುಗಿದು ಹೇಳುತ್ತಿದ್ದೇನೆ.

ಅಧ್ಯಕ್ಷರು:- ನೀವು ಧರಣಿ ಕುಳಿತುಕೊಳ್ಳುವುದಕ್ಕೆ ಇನ್ನೂ ಅನೇಕ ಮುಖ್ಯ ವಿಚಾರಗಳು

ಬರುತ್ತಿವೆ. ಎಷ್ಟು ಸಾರಿ ಧರಣಿ ಕುಳಿತುಕೊಳ್ಳುವುದು?

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯವಾದ ವಿಚಾರ.

ಅಧ್ಯಕ್ಷರು:- ನಿಮಗೆ ಇನ್ನೂ ಗಹನವಾದ ವಿಚಾರಗಳು ಬರುತ್ತವೆ. ನೀವು ನನ್ನನ್ನು ನಂಬಿ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೇನೆ. ತಮಗೆ ಗೊತ್ತಿದೆ, ನಿಮ್ಮ ಬಗ್ಗೆ ನಂಬಿಕೆಯಲ್ಲಿ ಕಿಂಚಿತ್ ನಾನು ಹಿಂದೆ ಹೋಗುವುದಿಲ್ಲ. ಮಾನ್ಯ ನಾಣಯ್ಯನವರ ಬಗ್ಗೆ ಕೂಡ ನನಗೆ ಅಪಾರವಾದ ಗೌರವ ಇದೆ. ಆದರೆ ಅವರ ಮಾತಿನ ಬಗ್ಗೆ ಅವರ ಭರವಸೆ ಬಗ್ಗೆ, ಆದರಲ್ಲಿ ನನಗೆ ನಂಬಿಕೆ ಇಲ್ಲ. ಇಲ್ಲಿ ಸ್ಪಷ್ಟವಾಗಿ ಅವರು ಉತ್ತರ ಕೊಡಬೇಕು. ಗ್ರಾಮ ಪಂಚಾಯಿತಿಯವರು ಕೇಳುತ್ತಾರೆ.....

ಅಧ್ಯಕ್ಷರು:- ಅದಕ್ಕೆ ಅವರು ಉತ್ತರ ಕೊಡುತ್ತಾರೆ. ನೀವು ಧರ್ಮಸಿಂಗರು ಬಂದರೆ ಮಾತನಾಡುತ್ತೇನೆಂದು ಹೇಳಿದ್ದೀರಿ, ನೀವು ಅವರ ಜೊತೆ ಚರ್ಚೆ ಮಾಡಿ, ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಉತ್ತರ ನನಗೆ ಸ್ಪಷ್ಟವಾಗಬೇಕು. ನಾನು ಬಹಳ ನೋವು ಪಡುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ:- ಕೊಳವೆ ಬಾವಿಗಳು ಕೆಟ್ಟರೆ ರಿಪೇರಿ ಮಾಡುವುದು ಏನಿದೆ ಆ ಕೆಲಸ ಜಿಲ್ಲಾ ಪಂಚಾಯಿತಿ ವತಿಯಿಂದ ಆಗಬೇಕು. ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಆಸ್ತಿತ್ವಕ್ಕೆ ಬಂದಿದೆ. ಈ ಕೆಲಸವನ್ನು ಜಿಲ್ಲಾ ಪಂಚಾಯಿತಿಯವರು ಮಾಡಿಕೊಡಬೇಕಾದುದು ಅವರ ಕರ್ತವ್ಯ. ತಾವೇ ಹೇಳಿದಿರಿ, ತಮ್ಮ ತಾಲ್ಲೂಕಿನಲ್ಲಿ 120 ಕೊಳವೆ ಬಾವಿಗಳು ಕೆಟ್ಟು ಹೋಗಿವೆ ಎಂದು. ಕ್ಷೇತ್ರಕ್ಕೆ ಹೋದಾಗ ಕೊಳವೆ ಬಾವಿ ಕೆಟ್ಟು ಹೋಗಿದೆ, ರಿಪೇರಿ ಮಾಡುವುದಕ್ಕಾಗುವುದಿಲ್ಲ ಅಂದರೆ ಜನರು ನಮ್ಮ ಮಾನ ಮರ್ಯಾದೆ ತೆಗೆಯುತ್ತಾರೆಂದು ಹೇಳಿದಿರಿ. ಇಷ್ಟು ನಾನು ಭರವಸೆ ಕೊಡುತ್ತೇನೆ. ನಿಮ್ಮ ಮಾನ ಮರ್ಯಾದೆ ತೆಗೆಯುವುದಕ್ಕೆ ಖಂಡಿತ ಸರ್ಕಾರ ಬಿಡುವುದಿಲ್ಲ. ಆ ಕೆಲಸವನ್ನು ನಾವು ಮಾಡುತ್ತೇವೆ. ತಾವು ಹೇಳಿರತಕ್ಕ ವಿಚಾರಗಳನ್ನು ಸರ್ಕಾರ ತೀವ್ರವಾಗಿ ಗಮನಿಸಿದೆ. ಜಿಲ್ಲಾ ಪಂಚಾಯಿತಿಯಲ್ಲಿರತಕ್ಕ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಈಗಾಗಲೇ ಒಂದು ಆದೇಶ ಕಳುಹಿಸಿ ಯಾವ ಯಾವ ಜಿಲ್ಲೆಗಳಲ್ಲಿ ಕೊಳವೆ ಬಾವಿ ಕೆಟ್ಟು ಹೋಗಿವೆ ಅವನ್ನು ತ್ವರಿತ ಗತಿಯಲ್ಲಿ ಇನ್ನು ಎರಡು ತಿಂಗಳೊಳಗೆ ಪ್ರತಿಯೊಂದು ಕೊಳವೆ ಬಾವಿ ರಿಪೇರಿ ಮಾಡುವುದಕ್ಕೆ ಸರ್ಕಾರದ ವತಿಯಿಂದ ಆದೇಶ ಕೊಟ್ಟು ಆ ಕೆಲಸ ಮಾಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಉತ್ತರ ನನಗೆ ಸ್ಪಷ್ಟವಾಗಬೇಕು. ನಾಳೆಯಿಂದ ಏನು ಎಂದು ತೀರ್ಮಾನವಾಗಬೇಕು. ಎರಡುತಿಂಗಳೊಳಗೆ ಸರಿಪಡಿಸುತ್ತೇವೆಂದು ಹೇಳಿದಿರಿ. ನಾವು ನಿಮ್ಮನ್ನು ಎರಡು ತಿಂಗಳಾದ ಮೇಲೆ ನೋಡುವುದು ಎಲ್ಲಿ? ನಿಮ್ಮನ್ನು ಇನ್ನು ನೋಡಬೇಕಾದರೆ 3 ತಿಂಗಳು, 6 ತಿಂಗಳು. ಇನ್ನು 6 ತಿಂಗಳು ಆರಾಮವಾಗಿ ಇರುವುದಕ್ಕೆ 6 ತಿಂಗಳಿಗೆ ಲೇಖಾನುದಾನ ಪಡೆದಿದ್ದೀರಿ.

ಅಧ್ಯಕ್ಷರು:- ಮೂರು ತಿಂಗಳು ಅಷ್ಟೆ. ಮತ್ತೆ 3 ತಿಂಗಳಲ್ಲಿ ಬರುತ್ತಾರೆ. ಯಾವ ಇದಕ್ಕೂ ತೊಂದರೆಯಾಗದಂತೆ ಎರಡು ತಿಂಗಳಲ್ಲಿ ರಿಪೇರಿ ಕೆಲಸ ಪೂರ್ತಿ ಮಾಡಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ತಾವು ಜವಾಬ್ದಾರಿ ತೆಗೆದುಕೊಳ್ಳುವುದಾದರೆ ತಮಗೆ ವಹಿಸಿ ಬಿಡುತ್ತೇನೆ. ನನಗೆ ಮಾನ್ಯ ನಾಣಯ್ಯನವರ ಬಗ್ಗೆ ನಂಬಿಕೆ ಇದೆ. ಆದರೆ, ಅವರು ಸಿಗುವುದಿಲ್ಲ.

ಅಧ್ಯಕ್ಷರು:- ನೀವು ಟೋಪಿ ಹಾಕಿದ್ದೀರಿ, ನನಗೆ ಗೊತ್ತಿಲ್ಲ ಒಳಗೆ ಏನಿದೆ ಎಂದು. ನಿಮ್ಮಂಥವರ ಮಧ್ಯೆ ನಾನು ಬರುವುದಕ್ಕೆ ಇಷ್ಟಪಡುವುದಿಲ್ಲ. ನನಗೆ ಇನ್ನೂ ಸ್ವಲ್ಪ ಕೂದಲು ಇವೆ. ನಾನು ಈ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾವು ಜವಾಬ್ದಾರಿ ತೆಗೆದುಕೊಳ್ಳದಿದ್ದರೆ, ನಾನು ಧರಣಿ ಕುಳಿತುಕೊಳ್ಳುತ್ತೇನೆ.

(ಶ್ರೀ ವಾಟಾಳ್ ನಾಗರಾಜ್ ಅವರು ಅಧ್ಯಕ್ಷರ ಮುಂದೆ ಧರಣಿ ಹೂಡಿದರು.)

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರ ಮೇಲೆ ಜವಾಬ್ದಾರಿ ಹಾಕಬೇಡಿ. ಈಗ ಗೊತ್ತಾಗುತ್ತದಲ್ಲ ಅಧ್ಯಕ್ಷರಿಗೂ ನಿಮಗೂ ಇರತಕ್ಕ ಆತ್ಮೀಯತೆ. ನಾವು ಯಾವ ಕೆಲಸ ಮಾಡಿದರೂ ಅಧ್ಯಕ್ಷರು ಬೇಡ ಎನ್ನುವುದಿಲ್ಲ. ಆ ಕೆಲಸ ಮಾಡುವ ಜವಾಬ್ದಾರಿ ನಮ್ಮದು, ಸರ್ಕಾರದ್ದು. ನೀವು 120 ಕೊಳವೆ ಬಾವಿಗಳು ಎಂದು ಹೇಳಿದ್ದೀರಿ. ನಿಮ್ಮ ಒಂದೇ ಕ್ಷೇತ್ರ ಅಲ್ಲ. ಎಷ್ಟು ಕೊಳವೆ ಬಾವಿಗಳು ಕೆಟ್ಟು ಹೋಗಿವೆ ಎಂದು ಎಲ್ಲ ಕ್ಷೇತ್ರಗಳಲ್ಲಿ ಕೆಟ್ಟಿರತಕ್ಕ ಕೊಳವೆ ಬಾವಿಗಳನ್ನು ಇನ್ನು ಎರಡು ತಿಂಗಳಲ್ಲಿ ರಿಪೇರಿ ಮಾಡತಕ್ಕ ಕೆಲಸವನ್ನು ಇಲಾಖೆಯ ವತಿಯಿಂದ, ಜಿಲ್ಲಾ ಪಂಚಾಯಿತಿಯ ವತಿಯಿಂದ ಮಾಡಿಸುತ್ತೇವೆ. ವಿಶೇಷವಾಗಿ ನಿಮ್ಮ ಕ್ಷೇತ್ರದಲ್ಲಿ ಈ ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಚಂದ್ರಕಾಂತ ಜಿ.ಬೆಲ್ಲದ್:- ಇಡೀ ರಾಜ್ಯದಲ್ಲಿ ಎಲ್ಲಾ ಬೋರ್‌ವೆಲ್‌ಗಳು ಕೆಟ್ಟು ಹಾಳಾಗಿವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಜಾಲಪ್ಪನವರ ಹತ್ತಿರ ಈ ವರ್ಷದ್ದು 35 ಕೋಟಿ ರೂಪಾಯಿ ಇದೆ. ಫಸ್ಟ್ ಎಪ್ರಿಲ್‌ಗೆ ಅವರ ಕೆಲಸ ಪ್ರಾರಂಭವಾಗುತ್ತದೆ. 35 ಕೋಟಿ ರೂಪಾಯಿ ನ್ಯಾಚುರಲ್ ಕಲಾಮಿಟಿ ಫಂಡ್‌ನಿಂದ ಅವರಿಗೆ ಬರತಕ್ಕದ್ದು. ಈಗ ನೀರಿನ ಕೊರತೆ ಇದ್ದಾಗ ಕನಿಷ್ಟ ಪಕ್ಷ ಒಂದೊಂದು ಕ್ಷೇತ್ರಕ್ಕೆ 25-30 ಲಕ್ಷ ಹೀಗೆ ಕಾದಿಟ್ಟರೆ, ಖಂಡಿತ ಈ ಸಮಸ್ಯೆಗಳನ್ನು ನಿವಾರಿಸಬಹುದು. ನಾನು ಎಲ್ಲಾ ಕಡೆ ಸಾರಾಸಗಟಾಗಿ ಡಿಸ್ಟ್ರಿಬ್ಯೂಟ್ ಮಾಡಿ ಎಂದು ಹೇಳುವುದಿಲ್ಲ. ಎಲ್ಲಿ ಇದರ ಕೊರತೆ ಇದೆ, ತೊಂದರೆ ಇದೆ ಅಂಥ ಕಡೆ ಕೊಡಿ. ಏಕೆಂದರೆ ತಮಗೂ ಕೇಂದ್ರ ಸರ್ಕಾರದಿಂದ ಅಡ್ವಾನ್ಸ್ ಬರಬೇಕು. ಮೂರನೆಯ ಎರಡು ಭಾಗ ಹಣ ಬರುತ್ತದೆ. ಇದು ಖರ್ಚು ಮಾಡಿದ ಮೇಲೆ ಏನಾದರೂ ಕಡಿಮೆ ಇದ್ದರೆ, ನಿಮ್ಮ ಹಣ ನೀವು ಹಾಕಿಕೊಳ್ಳಬೇಕು. ದಯವಿಟ್ಟು ನೀರಿನ ಕೊರತೆ ಇದ್ದಲ್ಲಿ ಒಪ್ಪಿ, ಕೊಡಿ. ಏಕೆಂದರೆ ತಾವು ಹೆಲಿಕ್ಯಾಪ್ಟರ್‌ನಲ್ಲಿ ಓಡಾಡುತ್ತೀರಿ ಅಂತ ಇವತ್ತು ಬಂದಿದೆ. ತಾವು ಪ್ರಕಾಶ್ ಅವರು ನೀರಿಗಾರಿ ಇಡೀ ಕರ್ನಾಟಕ ರಾಜ್ಯದಲ್ಲಿ ಬೀದರ್‌ನಿಂದ ಕೂರ್ಗ್‌ವರೆಗೆ ಕೋಲಾರದಿಂದ ಬೆಳಗಾಂವರೆಗೆ ಇಬ್ಬರೂ ಸೇರಿ ಹೆಲಿಕ್ಯಾಪ್ಟರ್‌ನಲ್ಲಿ ಅಡ್ಡಾಡಿ ಪಾರ್ಲಿಮೆಂಟ್ ಚುನಾವಣೆಗೂ ಆಯಿತು, ನೀವು ನೀರು ಕೊಡುವುದೂ ಆಯಿತು, ಈ ಎರಡನ್ನೂ ಮಾಡಬೇಕು ಎನ್ನತಕ್ಕಂಥದ್ದು; ಅದಕ್ಕಾಗಿ ಅವರು ಹೆಲಿಕ್ಯಾಪ್ಟರ್‌ನಲ್ಲಿ ಹೋಗಿ ನೀರು

ಕೊಡುವವರಿದ್ದಾರೆ, ಪೇಪರ್‌ನಲ್ಲಿ ಬಂದಿದೆ. ಕ್ಯಾಬಿನೆಟ್ ನಿರ್ಣಯ ಆಗಿದೆ. ಅದಕ್ಕೆ ತಕ್ಷಣ ಏನು ನಿರ್ಣಯ ಆಗಿದೆ, ಏನು ತಾವು ಮಾಡಬೇಕೆಂದಿದ್ದೀರಿ ಹೇಳಿ.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಅಧ್ಯಕ್ಷರೆ, ಈಗ ಹದಿನೈದು ದಿವಸದಲ್ಲಿ 10 ಕೋಟಿ ರಿಲೀಸ್ ಮಾಡಿದ್ದೇವೆ. ಇನ್ನು 3 ಕೋಟಿ 96 ಲಕ್ಷ ರೂಪಾಯಿ ಮಾತ್ರ ಸಿ.ಆರ್.ಫಂಡ್ಸ್ ಇದೆ. ಅದನ್ನೂ ಕೂಡ ಮೂರು ನಾಲ್ಕು ದಿವಸದಲ್ಲಿ ರಿಲೀಸ್ ಮಾಡುತ್ತೇವೆ. ಮತ್ತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ನಾವೆ ಪರ್ಸನಲ್ಲಾಗಿ ಫೋನ್ ಮಾಡಿ ಎಲ್ಲರಿಗೂ ಹೇಳಿದ್ದೇವೆ. ಎಷ್ಟೇ ಬಾವಿಗಳು ಬೇಕಾದರೂ ತಹಸೀಲ್ದಾರರು ಮತ್ತು ಜಿಲ್ಲಾ ಪಂಚಾಯಿತಿ ಇಂಜಿನಿಯರ್ಸ್ ಸ್ಥಳವನ್ನು ಇನ್‌ಸ್ಪೆಕ್ಟ್ ಮಾಡಲಿ, ಎಲ್ಲೆಲ್ಲಿ ಅವಶ್ಯಕತೆ ಇದೆ ನೋಡಿ ಎಂದು ಹೇಳಿದ್ದೇವೆ. ಇನ್ನೂ 10 ರಿಂದ 15 ಕೋಟಿ ರೂಪಾಯಿಗಳನ್ನು ಇನ್ನು 2 ದಿವಸದಲ್ಲಿ ರಿಲೀಸ್ ಮಾಡುತ್ತಿದ್ದೇವೆ. As far as possible we will see there will be no problem for drinking water. ಕೆಲವು ಕಡೆಯಿಂದ ನಮಗೆ ವರದಿ ಬಂದಿದೆ 550 ಅಡಿ ಹಾಕಿದರೂ ನೀರು ಸಿಕ್ಕಿಲ್ಲ. ಅವರ ಗ್ರಹಚಾರವೋ ನಮ್ಮ ಗ್ರಹಚಾರವೋ ದೇವರಿಗೆ ಗೊತ್ತು. 550 ಅಡಿ ಹಾಕಿದರೂ ಸಿಕ್ಕಲಿಲ್ಲ ಅಂದರೆ ಇನ್ನು ಆಕಾಶಕ್ಕೆ ಹಾಕಬೇಕು. ಇನ್ನೆಲ್ಲೂ ಅಲ್ಲಿ ನೀರು ಸಿಕ್ಕುವುದಿಲ್ಲ. ಅಂಥ ಕಡೆ ಏನಾದರೂ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಾ ನೋಡಿ. ಇಲ್ಲದಿದ್ದರೆ ಸದ್ಯಕ್ಕೆ ಟ್ಯಾಂಕರ್‌ನಲ್ಲಾದರೂ ಪ್ರೊವೈಡ್ ಮಾಡಿ ಅಂತ ಹೇಳಿದ್ದೇವೆ. As far as water is concerned, I can assure this House that we will do our best.

ಶ್ರೀ ಎ.ರಾಮದಾಸ್:- ಸ್ವಾಮಿ ನಿಮ್ಮ ಹತ್ತಿರ ರಿಗ್‌ಗಳೇ ಇಲ್ಲ. ಪ್ರೈವೇಟ್ ರಿಗ್ಸ್ ಕೂಡ ನಮ್ಮ ಮಲೆನಾಡಿನಂಥ ಪ್ರದೇಶಕ್ಕೆ ಬರುವುದಿಲ್ಲ. ಸರ್ಕಾರಿ ರಿಗ್‌ಗಳೆಲ್ಲಾ ರಿಪೇರಿಗೆ ನಿಂತಿವೆ.

ಶ್ರೀ ಆರ್.ಎಲ್.ಜಾಲಪ್ಪ:- ಪ್ರೈವೇಟ್ ರಿಗ್‌ಗಳಿಗೆ ಟೆಂಡರ್ ಕರೆದಿದ್ದೇವೆ. ನೀವು ಟೆಂಡರ್ ಯಾರು ಹಾಕಿದ್ದಾರೆ ಅವರನ್ನು ಕರೆದು ನೆಗೋಷಿಯೇಟ್ ಮಾಡಿ ಎಂದು ಡೆಪ್ಯುಟಿ ಕಮೀಷನರುಗಳಿಗೆ ಹೇಳಿದ್ದೇವೆ. ನಾಲ್ಕು ದಿವಸದಲ್ಲಿ ಚೆಕ್ ಕೊಡುತ್ತೇವೆ ಎಂದು ನೆಗೋಷಿಯೇಟ್ ಮಾಡಿ ರೇಟ್ ಫಿಕ್ಸ್ ಮಾಡಿ ಅವರಿಗೆ ಎಂಟ್ರಸ್ಟ್ ಮಾಡಿ ಅಂತ ಹೇಳಿದ್ದೇವೆ.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್ ಅವರು ಸ್ವಸ್ಥಾನಕ್ಕೆ ಹಿಂದಿರುಗಬೇಕು ದಯಮಾಡಿ.

ಶ್ರೀ ವಾಟಾಳ್ ನಾಗರಾಜ್:- ನೀವು ಭರವಸೆ ಕೊಡುತ್ತೀರೋ?

ಅಧ್ಯಕ್ಷರು:- ಓ, ಆಗಬಹುದು.

(ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಎಂ.ಸಿ.ನಾಣಯ್ಯ:- ಅಧ್ಯಕ್ಷರು ಭರವಸೆ ಕೊಟ್ಟ ಮೇಲೆ ಪುನಃ ಅದು ಮತ್ತೆ ಸ್ಪೆಷಲ್ ಕೇಸ್ ಆಯಿತು. ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್:- ಕೇವಲ ಬೋರ್‌ವೆಲ್ ರಿಪೇರಿ ಮಾಡಿದರೆ ನೀರಿನ ಸಮಸ್ಯೆ ಬಗೆಹರಿಯುವುದಿಲ್ಲ. ಅದಕ್ಕೆ ಪ್ರತ್ಯೇಕವಾದಂಥ ಏಜೆನ್ಸಿ ಬೇಕು. ಪ್ರತ್ಯೇಕವಾದಂಥ ಏಜೆನ್ಸಿ ಮಾಡಿದರೆ ಇದಕ್ಕೇನಾದರೂ ಅನುಕೂಲವಾಗುತ್ತದೆ. ಆಮೇಲೆ ನಾವು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು

ಪಂಚಾಯಿತಿಗೆ ಕೇಳಬೇಕು. ಕಳೆದ 8 ತಿಂಗಳಿಂದ ನನ್ನ ಕ್ಷೇತ್ರದಲ್ಲಿ ನೂರಾರು ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ. ಕೇಳಿದಾಗಲೆಲ್ಲಾ ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆ ಎಂದು.....

ಅಧ್ಯಕ್ಷರು:- ನಾಚಿಗೆಟ್ಟವರು ಈ ಸಮಾಜದಲ್ಲಿ ಇರುವವರೆಗೆ ಸಮಸ್ಯೆಗಳಿರುತ್ತವೆ. ಸರ್ಕಾರದ ಹಣವನ್ನು ನಿರ್ಲಜ್ಜಿತರಾಗಿ ತಿನ್ನತಕ್ಕವರು ಎಲ್ಲಿಯವರೆಗೆ ಜೀವಂತವಾಗಿರುತ್ತಾರೆ ಅಲ್ಲಿಯವರೆಗೂ ಈ ಸಮಸ್ಯೆಗಳಿರುತ್ತವೆ. ಸುಳ್ಳು ಲೆಕ್ಕ ಕೊಡತಕ್ಕಂಥದ್ದು, ಸುಳ್ಳು ಮಾಹಿತಿ ಕೊಡತಕ್ಕಂಥದ್ದು ನಾಚಿಕೆಗೆಟ್ಟು ತಿನ್ನತಕ್ಕದ್ದು ಇರುವವರೆಗೆ ನಮಗೆ ಈ ಕಷ್ಟ ತಪ್ಪಿದ್ದಲ್ಲ.

ಶ್ರೀ ಚಂದ್ರಕಾಂತ ಜಿ.ಬೆಲ್ಲದ್:- ಅಂಥವರಿಗೆ ಸರ್ಕಾರ ಶಿಕ್ಷೆ ಕೊಡಬೇಕು.

ಅಧ್ಯಕ್ಷರು:- ಸರ್ಕಾರ ಅಲ್ಲ ಕೊಡಬೇಕಾಗಿರುವುದು. ಸಮಾಜ ಕೊಡಬೇಕು. ಅವರನ್ನೆಲ್ಲಾ ಕರೆದು ಸನ್ಮಾನಗಳನ್ನು ಮಾಡುತ್ತೇವೆ ನಾವು.

ಶ್ರೀ ಆರ್.ಎಲ್.ಜಾಲಪ್ಪ:- ಎಷ್ಟು ಅಡಿ ಹಾಕುತ್ತಾರೆ ಅಂತ ಹೋಗಿ ನೋಡುವುದಿಲ್ಲ ಸಾರ್ ಅಲ್ಲಿ. ನೀರು ಮಾತ್ರ ಬೇಕು ಅವರಿಗೆ, ಹಳ್ಳಿಯಲ್ಲಿ ಕೆಲಸ ಹೇಗೆ ಮಾಡುತ್ತಾರೆ ನೋಡುವುದಿಲ್ಲ.

ಅಧ್ಯಕ್ಷರು:- ಊರಿನಲ್ಲಿ ಒಡೆದ ಮೂರು ದಿವಸಕ್ಕೆ ತೆಗೆದು ಬಿಸಾಕುತ್ತಾರೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಶಾಸಕರು ಹೇಳಿದ್ದಕ್ಕೆ ಸದಸ್ಯರು ಹೇಳಿದ್ದಕ್ಕೆ ಗೌರವವಿದ್ದರೆ ಏನಾದರೂ.....

ಅಧ್ಯಕ್ಷರು:- ಒಂದು ನಿಮಿಷ ಚಂದ್ರಕಾಂತ್ ಅವರೆ.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಜಿಲ್ಲಾ ಪಂಚಾಯತ್ ಸದಸ್ಯರು ಹೇಳಿದರೆ, ತಾಲ್ಲೂಕು ಪಂಚಾಯತ್ ಸದಸ್ಯರು ಹೇಳಿದರೆ ಅದಕ್ಕೆ.....

ಅಧ್ಯಕ್ಷರು:- ಸನ್ಮಾನ್ಯ ಸಗೀರ್ ಅಹಮದ್ ಅವರು.

ಶ್ರೀ ಸಿ.ಆರ್.ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೆ, ಈ ಕೊಳವೆಬಾವಿಗಳ ದುರಸ್ತಿ ಬಗ್ಗೆ ಆಗಲೀ, ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಯುವುದರ ಬಗ್ಗೆ ಆಗಲೀ ಸರ್ಕಾರ ಮಾನ್ಯ ವಾಟಾಳ್ ನಾಗರಾಜ್ ಅವರ ಬೇಡಿಕೆಗಾಗಿ ಅವರಿಗೆ ಸಮಾಧಾನಕರವಾದಂಥ ಉತ್ತರ ಕೊಟ್ಟಿದೆ. ನಮಗೂ ಅದೇ ರೀತಿಯಲ್ಲಿ ಮಾನ ಮರ್ಯಾದೆ ಉಳಿಯಬೇಕಾದಂಥ ಪಕ್ಷದಲ್ಲಿ.....

ಅಧ್ಯಕ್ಷರು:- ನಾನಿದ್ದೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ತಾವು ಉಳಿಸಿದರೆ ಸಂತೋಷ ಸಾರ್.

ಅಧ್ಯಕ್ಷರು:- ಸಗೀರ್ ಅವರ ಮಾನ ಮರ್ಯಾದೆಯ ಜವಾಬ್ದಾರಿ ನನ್ನದು.

ಶ್ರೀ ಸಿ.ಆರ್.ಸಗೀರ್ ಅಹಮದ್:- ಇದರಲ್ಲಿ ಮುಖ್ಯವಾಗಿ ಇರುವಂಥ ಸಮಸ್ಯೆ ಎರಡಿದೆ ಸಾರ್. ಒಂದನೆಯದು ಅಂದರೆ ತಾಲ್ಲೂಕಾ ಇಂಜಿನಿಯರಿಂಗ್ ವಿಭಾಗದಲ್ಲಿ ಇರುವಂಥ ವಾಹನಗಳ ಸ್ಥಿತಿಗತಿಗಳು ಬಹಳ ಹದಗೆಟ್ಟಿದೆ. ಒಂದೊಂದು ತಾಲ್ಲೂಕಿಗೆ ಕೇವಲ ಎರಡೆರಡು ವಾಹನಗಳನ್ನು ಒದಗಿಸಿಕೊಟ್ಟಿರುವುದರಿಂದ ವಾಹನಗಳ ಸ್ಥಿತಿಗತಿ ಬಹಳ ಕೆಟ್ಟು ಹೋಗಿದೆ. ಜೊತೆಗೆ ವಾಹನಗಳು ದುರಸ್ತಿಯಲ್ಲಿರುತ್ತವೆ, ಇದರಿಂದ ಕೊಳವೆ ಬಾವಿಗಳ ದುರಸ್ತಿಯಾಗುವುದಕ್ಕೆ ಸಾಧ್ಯವಿಲ್ಲ. ಎರಡನೆಯದಾಗಿ ಮಾನ್ಯ ಕಾನೂನು ಸಚಿವರು ಹೇಳಿದ ಹಾಗೆ, ಕೆಲವು ಕೊಳವೆ ಬಾವಿಗಳನ್ನು ದುರಸ್ತಿಪಡಿಸುವಂಥ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಗೆ ಸಂಪೂರ್ಣವಾದಂಥ ಅಧಿಕಾರ

ಕೊಟ್ಟಿದ್ದರೂ ಸಹ, ಆ ಸಾಮಗ್ರಿಗಳನ್ನು ಒದಗಿಸಿಕೊಡುವಲ್ಲಿ ವಿಫಲರಾಗಿದ್ದಾರೆ. ಏಕೆಂದರೆ ನಾವು ನೇರವಾಗಿ ಜಿಲ್ಲಾ ಪಂಚಾಯಿತಿ ಸಭೆಗೆ ಹೋಗುವಂಥ ಸಂದರ್ಭದಲ್ಲಿ ಈ ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದು. ಮತ್ತೆ ಒಂದು ವಿಚಾರ ಸನ್ಮಾನ್ಯ ಅಧ್ಯಕ್ಷರೇ ತಾವು ಹೇಳಿದಿರಿ, ಈಗ ಕಂದಾಯ ಮಂತ್ರಿಗಳು ಹೇಳಿದರು. ಅಗತ್ಯವಾಗಿ ಕೊಳವೆಬಾವಿಗಳು ಎಲ್ಲೆಲ್ಲಿ ಬೇಕೋ ಅಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರವಾಗಿ ನಾವು ಕೊರೆಸುತ್ತೇವೆ ಅಂತ ಹೇಳಿ. ಆ ಕ್ಷೇತ್ರದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ತಾವು ರಚನೆ ಮಾಡಿಕೊಂಡಿದ್ದೀರಿ. ಟಾಸ್ಕ್‌ಫೋರ್ಸ್ ಸಮಿತಿ ಮುಖಾಂತರವಾಗಿ ಶಾಸಕರು ಆ ಗ್ರಾಮಕ್ಕೆ ಹೋಗುವಂಥ ಸಂದರ್ಭದಲ್ಲಿ ಅವರು ಸೂಚಿಸುವಂಥ ಜಾಗಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯುವಂಥದ್ದರ ಬಗ್ಗೆ ಅವರು ದಯಮಾಡಿ ಅನುವು ಮಾಡಿಕೊಡಬೇಕೆಂದು ನಾನು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

MR. SPEAKER:- You can not encroach upon the rights of the local taluk panchayat committees. You can make suggestions.

ಶ್ರೀ ಸಿ.ಆರ್.ಸಗೀರ್ ಅಹಮದ್:- ಅವರು ಮಾಡಿದ್ದಾರೆ ಸಾರ್ ಟಾಸ್ಕ್‌ಫೋರ್ಸ್ ಕಮಿಟಿ ಅಂತ.

ಅಧ್ಯಕ್ಷರು:- ಡಿಸೆಂಟ್ರಲೈಸೇಷನ್‌ಗೆ ಅರ್ಥ ಏನು? ನೀವು ಅವರು ಕೂಡ ಸಮನ್ವಯತೆಯಿಂದ ಮಾಡಬೇಕು. I move to the next question.

★**ಶ್ರೀ ಬಿ.ಬಿ. ಶಿವಪ್ಪ:-** ಅಧ್ಯಕ್ಷರೆ, ನೀರಿಲ್ಲ ಅಂದಕ್ಷಣ ಕೊಳವೆ ಬಾವಿ ಯೋಚನೆಯಾಗುತ್ತದೆ. ಕೊಳವೆ ಬಾವಿ ಇಲ್ಲದೆ ನಾವು ಎರಡು ಜಾಗದಲ್ಲಿ ಎಸ್ಟಿಮೇಟ್ ಮಾಡಿ ಕಳುಹಿಸಿದ್ದೇವೆ. ಶಾಶ್ವತವಾದಂಥ ಪರಿಹಾರ, ಯಾವತ್ತೂ ರಿಪೇರಿಗೂ ಕೂಡ ಹೋಗದೇ ಇರುವಂಥ ವ್ಯವಸ್ಥೆ. ಒಂದು ಜಾಗದಲ್ಲಿ 12 ಲಕ್ಷ ರೂಪಾಯಿ ಒಂದು ಜಾಗದಲ್ಲಿ 6 ಲಕ್ಷ ರೂಪಾಯಿ. ಪುನಃ ಅಲ್ಲಿ ಕೊಳವೆ ಬಾವಿ ತೆಗೆಯುವ ಯೋಚನೆಯಾಗುತ್ತದೆಯೇ ವಿನಹ ಇದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಎರಡನೆಯದು, ಹಿಂದೆ ಈ ಅವ್ಯವಹಾರದ ಬಗ್ಗೆ ಒಂದು ಸಮಿತಿ ರಚನೆಯಾಗಿತ್ತು. ನಾನು ಅದ ಅಧ್ಯಕ್ಷನಾಗಿ ಸನ್ಮಾನ್ಯ ನಾಣಯ್ಯನವರು ನಾಗೇಗೌಡರು ಆ ಸಮಿತಿಯಲ್ಲಿ ಭಾರಿ ಕೆಲಸ ಮಾಡಿ ಅನೇಕ ಬಾವಿಗಳನ್ನು ಪರೀಕ್ಷೆ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದೆವು. ಬಹುಶಃ ಆ ವರದಿ ಏನಾಯಿತೋ ಗೊತ್ತಿಲ್ಲ. ಅದರಲ್ಲಿ ಎಲ್ಲಾ ನ್ಯೂನತೆಗಳನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮತ್ತು ಕೊನೆಯದಾಗಿ ತಮಗೆ ಹೇಳತಕ್ಕಂಥದ್ದು ಈಗ ತಾನೇ ಹೇಳಿದರು ಶಿವಪ್ಪನವರು ಕೇವಲ ಕ್ಷೇತ್ರಕ್ಕೆ ಸೀಮಿತ ಆಗಿರುತ್ತಾರೆ ಎಂದು. ಇವತ್ತು ಧರಣಿ ಮಾಡುವವರೆಗೆ ನನ್ನ ಪ್ರಶ್ನೆ ಬಂದಿದೆ ಅಂತ ತಮ್ಮ ಗಮನಕ್ಕೆ ಬಂದಿರಲಿಲ್ಲ. ಇದು ಕೇವಲ ಬೋರ್‌ವೆಲ್ ಬಗ್ಗೆಯೇ ಚಿಂತೆ ಮಾಡಬಾರದು. ಈ ಬೋರ್‌ವೆಲ್‌ನಲ್ಲಿ ತುಂಬಾ ರ್ಯಾಕೆಟ್ ಇದೆ. ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿ ಇದೆ. ಅಲ್ಲಿ 12 ಮನೆ ಇದೆ ಮಾನ್ಯ ಅಧ್ಯಕ್ಷರೆ. 12 ಮನೆಗ 13 ಬೋರ್ ತೆಗೆದಿದ್ದಾರೆ. 12 ಬೋರ್ ಫೈಲ್ ಆಗಿದೆ 13ನೇ ಬೋರ್‌ನಲ್ಲಿ ಸಾಧಾರಣ ನೀರು ಬಂದಿದೆ. 1, 2, 3 ಫೈಲ್ ಆದ ತಕ್ಷಣ ಅದನ್ನು ನಿಲ್ಲಿಸಬೇಕಲ್ಲವಾ? ನಾನು ಸದನದಲ್ಲಿ ಹೇಳತಕ್ಕ ಮಾತು 13 ಬೋರ್ 12 ಮನೆಗೆ. ಹಣ ಎಷ್ಟಾಯಿತು? ಇದೇ ರೀತಿ

ಸಾಕಷ್ಟು ಬೋರ್‌ವೆಲ್‌ಗಳು ಕೆಲಸಕ್ಕೆ ಬಾರದೆ ನಿರುಪಯುಕ್ತವಾಗುತ್ತಿದೆ. ಇವತ್ತು ಹೊಸ ಹೊಸ ಬೋರ್‌ವೆಲ್‌ಗಳನ್ನು ತೆಗೆಯುವ ಬದಲು ಈಗಿರತಕ್ಕ ಬೋರ್‌ವೆಲ್‌ಗಳ ರಿಪೇರಿಗೆ ನೀವು ವ್ಯವಸ್ಥೆ ಮಾಡಿದರೆ ಸಾಕಷ್ಟು ಹಣ ಉಳಿಸಬಹುದು.

ಶ್ರೀ ಚಂದ್ರಕಾಂತ್ ಜಿ.ಬೆಲ್ಲದ್:- ಸರ್ಕಾರದ ಖಜಾನೆಗೇ ಬೋರ್ ಹಾಕುತ್ತಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ:- ಇದು ಒಪ್ಪುತ್ತೇವೆ ಮಾನ್ಯ ಸಭಾಧ್ಯಕ್ಷರೆ. ಇದರ ಬಗ್ಗೆ ನಾವು ಕಾರ್ಯಕ್ರಮ ಕೈಗೊಳ್ಳೋಣ.

ಅಧ್ಯಕ್ಷರು: ಇದು I explained to you ಬೈರೇಗೌಡರು ನಿಮ್ಮ ಪಕ್ಕದಲ್ಲೇ ಕುಳಿತಿದ್ದಾರೆ. ನಮ್ಮಲ್ಲಿ ಕೆಲವು ಕಡೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ವಾಟರ್‌ಸಪ್ಲೈ ಇರತಕ್ಕಂಥ ಕಡೆಗೆ ಎಗ್ಸಾಸ್ಟ್ ಆಗಿದ್ದರೆ ಅಡಿಷನಲ್ ಬೋರ್ ಹಾಕಿದ್ದೇವೆ ಅಂತ ಹೇಳಿ, ನೀರೇ ಸಿಗದಿರುವ ಬೋರ್‌ಗೆ ಸರ್ವೀಸ್ ಆಗಿದೆ ಅಂತ ತೋರಿಸಿ ಮೋಟಾರ್ ಖರೀದಿ ಮಾಡಿ ಮತ್ತೆ ಆದು ಸರ್ವೀಸ್ ಆದರೆ ಆ ಮೋಟಾರನ್ನು ಸೇಲ್ ಮಾಡಿಕೊಂಡು ಮತ್ತೆ ಇನ್ನೊಂದು ಪಾಯಿಂಟ್‌ಗೆ ಅಂತ ಹೇಳಿ ಮಾಡಿದ್ದಾರೆ. All these things have been done. ಇದು ನಿಮಗೆ ಆಶ್ಚರ್ಯ ಆಗಬಹುದು ನಾಣಯ್ಯನವರೇ you have seen my native village. 10 feet from my house, right in front of my house, in my village, they have done. Can you imagine?

SRI M.C.NANAIAH:- Sir, we have taken very serious note of some of the observations made by the Hon'ble Speaker and Hon'ble Members and the Government will certainly look into the lapses and we will take serious action against the officers concerned.

ವಿಷಯ:- ವಿರಾಜಪೇಟೆ ತಾಲ್ಲೂಕು ಪಂಚಾಯಿತಿಗೆ 1995-96ನೇ ಸಾಲಿನಲ್ಲಿ ಹಣ ಬಿಡುಗಡೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 125(657)

ಶ್ರೀ ಬಸವರಾಜು, ಹೆಚ್.ಡಿ.(ವಿರಾಜಪೇಟೆ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕು ಪಂಚಾಯಿತಿಗೆ 1995-96ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಆಗಿರುತ್ತದೆ. ಮತ್ತು ಎಷ್ಟು ವೆಚ್ಚವಾಗಿರುತ್ತದೆ.

ಆ) ಕೊಡಗು ಜಿಲ್ಲೆಗೆ ಜಿಲ್ಲಾ ಪಂಚಾಯತ್ ಪತಿಯಿಂದ ಎಷ್ಟು ಹಣ ವೆಚ್ಚವಾಗಿರುತ್ತದೆ. (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಸರ್ಕಾರದಿಂದ ತಾಲ್ಲೂಕು ಪಂಚಾಯಿತಿಗಳಲ್ಲಿ ಪ್ರತ್ಯೇಕವಾಗಿ ಹಣ ಬಿಡುಗಡೆಯಾಗುತ್ತಿಲ್ಲ. ಜಿಲ್ಲಾ ಪಂಚಾಯತ್‌ವಾರು ಮಾತ್ರ ಬಿಡುಗಡೆಯಾಗುತ್ತಿದ್ದು, ಜಿಲ್ಲಾ